ಸೃಜನಿ

**SRUJANI: Indian Journal of Innovative Research and Development (SIJIRD)**
Volume-5 Issue 3, July-August 2026, Pp. 12-15
Bi-Monthly, Peer-Reviewed, Open Access, Indexed Journal

**I S S N: 2583-3510**
**SIRDF**
**JOURNALS**
editor@srujani.in
www.srujani.in

# ಉಷಾ ನರಸಿಂಹನ್ ಅವರ 'ಕೃಷ್ಣಮೃಗ' ಕಾದಂಬರಿಯಲ್ಲಿ ಮಹಿಳಾ ಮನಸ್ಸಿನ ಸಂಘರ್ಷ ಮತ್ತು ಸಂಬಂಧಗಳ ಪುನರ್ ನಿರ್ಮಾಣ

**ಅಶ್ವಿನಿ ಹೆಚ್. ಬಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**Abstract:**

*ಕನ್ನಡ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಅಂತರಂಗದ ಸಂಕೀರ್ಣತೆಗಳು, ಭಾವನಾತ್ಮಕ ಸಂಘರ್ಷಗಳು ಹಾಗೂ ಸಾಮಾಜಿಕ ಸಂಬಂಧಗಳ ಬದಲಾವಣೆಗಳು ಪ್ರಮುಖ ಅಧ್ಯಯನದ ವಿಷಯಗಳಾಗಿವೆ. ಉಷಾ ನರಸಿಂಹನ್ ಅವರ 'ಕೃಷ್ಣಮೃಗ' ಕಾದಂಬರಿಯು ಮಹಿಳಾ ಮನಸ್ಸಿನ ಸೂಕ್ಷ್ಮ ಭಾವನೆಗಳು, ಆತ್ಮಸಂಘರ್ಷ ಮತ್ತು ಅಸ್ತಿತ್ವದ ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಕಾದಂಬರಿಯ ಮಹಿಳಾ ಪಾತ್ರಗಳು ಕುಟುಂಬ, ಪ್ರೀತಿ, ವೈವಾಹಿಕ ಸಂಬಂಧ ಹಾಗೂ ಸಾಮಾಜಿಕ ನಿರೀಕ್ಷೆಗಳ ನಡುವೆ ಎದುರಿಸುವ ಸಂಘರ್ಷಗಳು ಅವರ ಮನೋಲೋಕದ ವಿವಿಧ ಆಯಾಮಗಳನ್ನು ತೆರೆದಿಡುತ್ತವೆ. ಸಂಬಂಧಗಳಲ್ಲಿನ ಬಿರುಕು, ಭಾವನಾತ್ಮಕ ದೂರ ಮತ್ತು ಪರಸ್ಪರ ಅರ್ಥೈಸಿಕೊಳ್ಳುವಿಕೆಯ ಕೊರತೆಯ ನಡುವೆಯೂ ಹೊಸ ಸಂಬಂಧಗಳ ನಿರ್ಮಾಣದ ಸಾಧ್ಯತೆಯನ್ನು ಕಾದಂಬರಿ ಪ್ರತಿಪಾದಿಸುತ್ತದೆ. ಈ ಹಿನ್ನೆಲೆಯಲ್ಲಿ 'ಕೃಷ್ಣಮೃಗ'ದಲ್ಲಿ ಮಹಿಳಾ ಮನಸ್ಸಿನ ಸಂಘರ್ಷ ಮತ್ತು ಸಂಬಂಧಗಳ ಪುನರ್‌ನಿರ್ಮಾಣವನ್ನು ವಿಶ್ಲೇಷಿಸುವುದು ಈ ಅಧ್ಯಯನದ ಮುಖ್ಯ ಆಶಯವಾಗಿದೆ.*

**Keywords:** *ಕನ್ನಡ ಸಾಹಿತ್ಯ, ಉಷಾ ನರಸಿಂಹನ್, ಕೃಷ್ಣಮೃಗ ಕಾದಂಬರಿ, ಮಹಿಳೆ, ಮನಸ್ಸು.*

## ಪೀಠಿಕೆ

ಕನ್ನಡ ಕಾದಂಬರಿ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಅಂತರಂಗದ ಸಂಘರ್ಷಗಳು, ಕುಟುಂಬ ಸಂಬಂಧಗಳ ಸಂಕೀರ್ಣತೆ, ಪ್ರೀತಿ, ದಾಂಪತ್ಯ, ತ್ಯಾಗ, ಆತ್ಮಗೌರವ ಮತ್ತು ವೈಯಕ್ತಿಕ ಆಯ್ಕೆಗಳ ಪ್ರಶ್ನೆಗಳು ಮಹತ್ವದ ಅಧ್ಯಯನ ವಿಷಯಗಳಾಗಿವೆ. ಈ ಹಿನ್ನೆಲೆಯಲ್ಲಿ 'ಕೃಷ್ಣಮೃಗ' ಕಾದಂಬರಿಯು ಮಹಿಳಾ ಮನಸ್ಸಿನ ವಿವಿಧ ಪದರಗಳನ್ನು ಮತ್ತು ಮಾನವ ಸಂಬಂಧಗಳ ಪುನರ್ನಿರ್ಮಾಣದ ಸಾಧ್ಯತೆಗಳನ್ನು ಅನಾವರಣಗೊಳಿಸುವ ಕೃತಿಯಾಗಿ ಗಮನಾರ್ಹ ವಾಗಿದೆ.

ಕಾದಂಬರಿಯಲ್ಲಿನ ಶಾರದಾ ಮತ್ತು ನಳಿನಿ ಎಂಬ ಎರಡು ಪ್ರಮುಖ ಮಹಿಳಾ ಪಾತ್ರಗಳು ಒಂದೇ ರೀತಿಯ ಬದುಕನ್ನು ಪ್ರತಿನಿಧಿಸದೆ, ವಿಭಿನ್ನ ಅನುಭವಗಳು ಮತ್ತು ಮನೋಭಾವಗಳ ಮೂಲಕ ಮಹಿಳಾ ಅಸ್ತಿತ್ವದ ವೈವಿಧ್ಯತೆಯನ್ನು ತೋರಿಸುತ್ತವೆ. ಶಾರದಾಳಲ್ಲಿ ಪ್ರೀತಿ, ಬೌದ್ಧಿಕತೆ, ಆತ್ಮನಿಯಂತ್ರಣ, ತ್ಯಾಗ ಮತ್ತು ನೈತಿಕ ಹೊಣೆಗಾರಿಕೆಗಳು ಪ್ರಮುಖವಾಗಿದ್ದರೆ, ನಳಿನಿಯ ಪಾತ್ರದಲ್ಲಿ ದಾಂಪತ್ಯದ ಸಂಘರ್ಷ, ಪಶ್ಚಾತ್ತಾಪ, ಆತ್ಮಪರಿಶೀಲನೆ ಮತ್ತು

**_Please cite this article as:_** ಅಶ್ವಿನಿ, ಹೆಚ್.ಬಿ. (2026). ಉಷಾ ನರಸಿಂಹನ್ ಅವರ 'ಕೃಷ್ಣಮೃಗ' ಕಾದಂಬರಿಯಲ್ಲಿ ಮಹಿಳಾ ಮನಸ್ಸಿನ ಸಂಘರ್ಷ ಮತ್ತು ಸಂಬಂಧಗಳ ಪುನರ್ ನಿರ್ಮಾಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 12–15

ಸಂಬಂಧವನ್ನು ಪುನಃ ಕಟ್ಟಿಕೊಳ್ಳುವ ಹಂಬಲಗಳು ಮುಖ್ಯವಾಗಿ ಕಾಣಿಸುತ್ತವೆ.

ಶಾರದೆಯ ಬದುಕಿನಲ್ಲಿ ವಿವಾಹವು ನಿರೀಕ್ಷಿಸಿದ ನೆಮ್ಮದಿಯನ್ನು ನೀಡುವುದಿಲ್ಲ. ವಿವಾಹದ ಆರು ತಿಂಗಳಲ್ಲೇ ತವರಿಗೆ ಮರಳುವ ತಾನು ಅನುಭವಿಸಿದ ದಾಂಪತ್ಯ ವೈಫಲ್ಯವನ್ನು ಜೀವನದ ಅಂತ್ಯವೆಂದು ಪರಿಗಣಿಸದೆ, ಮತ್ತೆ ಶಿಕ್ಷಣವನ್ನು ಮುಂದುವರಿಸಿ ಶಿಕ್ಷಕಿಯಾಗಿ, ನಂತರ ಸಾಹಿತ್ಯ ವಿಮರ್ಶಕಿಯಾಗಿ ತನ್ನದೇ ಆದ ಗುರುತನ್ನು ನಿರ್ಮಿಸಿಕೊಳ್ಳುತ್ತಾಳೆ. ಶಾರದೆಯು ವಿಚ್ಛೇದನವನ್ನು ಅವಳು ತನ್ನ ಬದುಕಿನ ಅಪಮಾನವೆಂದು ಪರಿಗಣಿಸುವುದಿಲ್ಲ. ಮಹಿಳೆಯ ಅಸ್ತಿತ್ವವನ್ನು ಗಂಡ ಮತ್ತು ಮಕ್ಕಳ ಮೂಲಕ ಮಾತ್ರ ಗುರುತಿಸಬೇಕೆಂಬ ಸಾಮಾಜಿಕ ಚೌಕಟ್ಟನ್ನು ಅವಳು ಮೀರುತ್ತಾಳೆ. ಶಾರದಾಳ ಮತ್ತೊಂದು ಪ್ರಮುಖ ಗುಣ ಅವಳ ಬೌದ್ಧಿಕತೆ.

ಹಿಂದೆ ಮಹಿಳೆಯ ವ್ಯಕ್ತಿತ್ವವನ್ನು ಬಹುಮಟ್ಟಿಗೆ 'ಪತ್ನಿ', 'ತಾಯಿ', 'ಸೊಸೆ' ಮುಂತಾದ ಕುಟುಂಬದ ಪಾತ್ರಗಳ ಮೂಲಕ ಗುರುತಿಸಲಾಗುತ್ತಿತ್ತು. ಆದರೆ ಇಂದಿನ ಮಹಿಳೆ ತನ್ನದೇ ಆದ ಆಸೆ, ಅಭಿಪ್ರಾಯ, ವೃತ್ತಿ ಮತ್ತು ಕನಸುಗಳನ್ನು ಹೊಂದಿರುವ ಸ್ವತಂತ್ರ ವ್ಯಕ್ತಿಯಾಗಿ ತನ್ನನ್ನು ಗುರುತಿಸಿಕೊಳ್ಳುತ್ತಿದ್ದಾಳೆ. ಇದರಿಂದ ಆಕೆಯ ಮನಸ್ಸಿನ ಸಂಘರ್ಷವು ಕೇವಲ ಕುಟುಂಬದೊಳಗಿನ ಸಮಸ್ಯೆಯಾಗದೆ, 'ನಾನು ಯಾರು?' ಎಂಬ ಅಸ್ತಿತ್ವದ ಪ್ರಶ್ನೆಯಾಗಿ ರೂಪಾಂತರಗೊಂಡಿದೆ. ಅದೇ ರೀತಿ ಶಾರದೆ ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡಿ, ವಿಮರ್ಶಾತ್ಮಕ ಬರಹಗಳನ್ನು ಬರೆಯುವ ಮತ್ತು ತನ್ನದೇ ಆದ ವೃತ್ತಿಪರ ಅಸ್ತಿತ್ವ ಹೊಂದಿರುವ ಮಹಿಳೆಯಾಗಿದ್ದಾಳೆ.

ನಳಿನಿಯ ಪಾತ್ರವು ಮಹಿಳಾ ಮನಸ್ಸಿನ ಮತ್ತೊಂದು ಮುಖವನ್ನು ಪ್ರತಿನಿಧಿಸುತ್ತದೆ. ನಳಿನಿ ಪುರುಷೋತ್ತಮನ ಪತ್ನಿಯಾಗಿ ಆರ್ಥಿಕವಾಗಿ ಸ್ವಾವಲಂಬಿಯಾಗಿದ್ದರೂ, ಅವರ ಬದುಕಿನ ಕುರಿತು ಅವಳ ದೃಷ್ಟಿಕೋನವು ಭಿನ್ನವಾಗಿದೆ. ಪುರುಷೋತ್ತಮನು ತನ್ನ ಇಂಜಿನಿಯರಿಂಗ್ ವೃತ್ತಿಯನ್ನು ತೊರೆದು ಬರಹಗಾರನಾಗಲು ಬಯಸುತ್ತಾನೆ. "ಫ್ರೀಟೈಮ್‌ನಲ್ಲಿ ಬರೀಬೇಕು, ಬರೆಯಕ್ಕೋಸ್ಕರ ಕರಿಯರ್ ಹಾಳು ಮಾಡಿಕೊಳ್ಳೋದು ಅವಾಸ್ತವಿಕ" ಆದರೆ ನಳಿನಿಗೆ ಉದ್ಯೋಗ, ಆರ್ಥಿಕ ಭದ್ರತೆ ಮತ್ತು ವೃತ್ತಿಜೀವನದ ಸ್ಥಿರತೆ ಮುಖ್ಯವಾಗುತ್ತದೆ. ಹೀಗಾಗಿ ದಾಂಪತ್ಯದಲ್ಲಿ ಸಂಘರ್ಷವು ಕೇವಲ ಪ್ರೀತಿ ಅಥವಾ ಭಾವನೆಯ ಕೊರತೆಯಿಂದ ಉಂಟಾಗುವುದಿಲ್ಲ; ಜೀವನದ ಗುರಿಗಳ ಕುರಿತ ಭಿನ್ನಾಭಿಪ್ರಾಯವೂ ಸಂಬಂಧದಲ್ಲಿ ಬಿರುಕು ಮೂಡಿಸಬಹುದು ಎಂಬುದನ್ನು ಕಾದಂಬರಿ ತೋರಿಸುತ್ತದೆ. ಆದರೆ ಕಾದಂಬರಿಯ ವಿಶೇಷತೆ ಎಂದರೆ ಅವಳನ್ನು ಕೇವಲ 'ತಪ್ಪು ಮಾಡಿದ ಮಹಿಳೆ'ಯಾಗಿ ಚಿತ್ರಿಸುವುದಿಲ್ಲ. ಕಾಲಕ್ರಮೇಣ ನಳಿನಿಯಲ್ಲಿ ಆತ್ಮಪರಿಶೀಲನೆಯ ಅರಿವು ಅವಳಲ್ಲಿ ಬೆಳೆಯುತ್ತದೆ. ಸಂಬಂಧ ಮುರಿದ ನಂತರ ಅದನ್ನು ಪುನಃ ಕಟ್ಟುವುದು ಸುಲಭದ ಪ್ರಕ್ರಿಯೆಯಲ್ಲ. ಅದಕ್ಕೆ ಹಿಂದಿನ ತಪ್ಪುಗಳನ್ನು ಒಪ್ಪಿಕೊಳ್ಳುವುದು, ಅಹಂಕಾರವನ್ನು ಬದಿಗಿಡುವುದು ಮತ್ತು ಮತ್ತೊಬ್ಬರ ನಂಬಿಕೆಯನ್ನು ಪುನಃ ಗಳಿಸುವ ಪ್ರಯತ್ನ ಅಗತ್ಯ.

ಪುರುಷೋತ್ತಮನು ತನ್ನ ಅಂತರಂಗದ ನೋವನ್ನು ಶಾರದೆಯ ಬಳಿ ಮಾತ್ರ ಹೇಳಿಕೊಳ್ಳಲು ಸಾಧ್ಯವಾಗುವುದು ಕೂಡ ಗಮನಾರ್ಹ. ನಳಿನಿಗೆ ತನ್ನ ಮನಸ್ಥಿತಿಯನ್ನು ವಿವರಿಸಲು ಅವನಿಗೆ ಸಾಧ್ಯವಾಗುವುದಿಲ್ಲ. ಶಾರದೆಗೆ ಪುರುಷೋತ್ತಮನು ಕೇವಲ ಹಳೆಯ ಸಹಪಾಠಿ ಅಲ್ಲ; ಅವಳ ಮನಸ್ಸನ್ನು ಅರ್ಥಮಾಡಿಕೊಳ್ಳಬಲ್ಲ ಆತ್ಮೀಯ ವ್ಯಕ್ತಿ. ಆದರೆ ಆತ್ಮೀಯತೆ ಎಂದರೆ ದಾಂಪತ್ಯ ಸಂಬಂಧವೇ ಆಗಬೇಕೆಂಬ ಅನಿವಾರ್ಯತೆಯನ್ನು ಕಾದಂಬರಿ ಒಪ್ಪುವುದಿಲ್ಲ. ಸಂಬಂಧಗಳಿಗೆ ವಿಭಿನ್ನ ರೂಪಗಳಿರಬಹುದು. ಸ್ನೇಹ, ಆತ್ಮೀಯತೆ, ಪರಸ್ಪರ ಗೌರವ ಮತ್ತು ಭಾವನಾತ್ಮಕ ಬೆಂಬಲ ಇವುಗಳೂ ಮಾನವ ಸಂಬಂಧಗಳ ಪ್ರಮುಖ ಆಯಾಮಗಳಾಗಿವೆ.

ಕಾದಂಬರಿಯಲ್ಲಿ ಮಹಿಳೆಯ ಸಂಘರ್ಷವು 'ನಾನು ಏನು ಬಯಸುತ್ತೇನೆ?' ಮತ್ತು 'ನಾನು ಏನು ಮಾಡಬೇಕು?' ಎಂಬ ಎರಡು ಪ್ರಶ್ನೆಗಳ ನಡುವೆ ನಡೆಯುತ್ತದೆ. ಒಂದು ಕಡೆ ಪುರುಷೋತ್ತಮನ ಮೇಲಿನ ಪ್ರೀತಿ, ಇನ್ನೊಂದು ಕಡೆ ನಳಿನಿಯ ಕುಟುಂಬವನ್ನು ಪುನಃ ಕಟ್ಟಿಕೊಳ್ಳುವ ಹಕ್ಕು, ಮತ್ತೊಂದು ಕಡೆ ಸಮರ್ಥನ ಭವಿಷ್ಯ. ಈ ಮೂರು ಅಂಶಗಳ ನಡುವೆ ಶಾರದಾ ತನ್ನ ನಿರ್ಧಾರವನ್ನು ರೂಪಿಸಿಕೊಳ್ಳುತ್ತಾಳೆ. ಅವಳ ದೃಷ್ಟಿಯಲ್ಲಿ ಪ್ರೀತಿ ಎಂದರೆ ಕೇವಲ ಪ್ರೀತಿಸುವ ವ್ಯಕ್ತಿಯನ್ನು ಪಡೆಯುವುದು ಅಲ್ಲ. ಕೆಲವೊಮ್ಮೆ ಪ್ರೀತಿಸುವ ವ್ಯಕ್ತಿಯ ಒಳಿತಿಗಾಗಿ ಅವನಿಂದ ದೂರ ಉಳಿಯುವುದೂ ಪ್ರೀತಿಯ ಒಂದು ರೂಪ. "ನೀನು ನನ್ನನ್ನು ಪ್ರೀತಿಸುವ ಹತ್ತು ಪಟ್ಟು ಹೆಚ್ಚು ನಾನು ನನ್ನನ್ನು ಪ್ರೀತಿಸುತ್ತೇನೆ. ಆದರೆ... ನನ್ನದೇ ಇತಿಮಿತಿಗಳಿವೆ" ಎಂಬ ಸ್ವಾಭಿಮಾನಪೂರ್ಣ ನಿಲುವಿನತ್ತ ಸಾಗುತ್ತದೆ. ಈ ಮಾತು ಶಾರದೆಯ ವ್ಯಕ್ತಿತ್ವದ ಕೇಂದ್ರವನ್ನು ಸೂಚಿಸುತ್ತದೆ. ಪ್ರೀತಿಸುವ ವ್ಯಕ್ತಿಯನ್ನು ಪಡೆಯುವುದಕ್ಕಿಂತ, ಅವನ ಬದುಕಿನ ಒಳಿತನ್ನು ಬಯಸುವುದು ಪ್ರೀತಿಯ ಉನ್ನತ ರೂಪ ಎಂಬ ಆಶಯ ಶಾರದಾಳ ಪಾತ್ರದ ಮೂಲಕ ವ್ಯಕ್ತವಾಗುತ್ತದೆ.

ಇಂದಿನ ಮಹಿಳೆ ಸಂಬಂಧವನ್ನು ಕೇವಲ ರಕ್ತಸಂಬಂಧ ಅಥವಾ ವಿವಾಹದ ಬಂಧನವೆಂದು ನೋಡುವುದಿಲ್ಲ. ಸ್ನೇಹ, ಪರಸ್ಪರ ವಿಶ್ವಾಸ, ಭಾವನಾತ್ಮಕ ಸಮೀಪತೆ, ಸಂವಹನ ಮತ್ತು ಗೌರವಗಳನ್ನು ಸಂಬಂಧದ ಆಧಾರಗಳಾಗಿ ಪರಿಗಣಿಸುತ್ತಾಳೆ. ಹೀಗಾಗಿ ಮುರಿದ ಸಂಬಂಧವನ್ನು ಕೇವಲ ಸಹಿಸಿಕೊಳ್ಳುವ ಬದಲು, ಅಗತ್ಯವಿದ್ದರೆ ಅದರ ಸ್ವರೂಪವನ್ನೇ ಬದಲಿಸುವ ಮನೋಭಾವವೂ ಬೆಳೆಯುತ್ತಿದೆ.

ಶಾರದಾ ಮತ್ತು ನಳಿನಿಯ ಬದುಕಿನಲ್ಲಿ ವೈಯಕ್ತಿಕ ಆಸೆ ಮತ್ತು ಕುಟುಂಬದ ಹೊಣೆಗಾರಿಕೆಯ ಸಂಘರ್ಷ ನಿರಂತರವಾಗಿದೆ. ಸಂಬಂಧಗಳು ಮುರಿಯಬಹುದು; ಆದರೆ ಮನುಷ್ಯನಲ್ಲಿ ಬದಲಾವಣೆಯ ಸಾಧ್ಯತೆ ಉಳಿದಿದ್ದರೆ ಅವುಗಳನ್ನು ಪುನಃ ಕಟ್ಟುವ ಅವಕಾಶವೂ ಇರುತ್ತದೆ. ಶಾರದೆ ನಳಿನಿಯನ್ನು ಕುರಿತು "ನೀನು ಪುರುವಿನ ಮೇಲೆ ಅಂತಹ ನಂಬಿಕೆ ಇದ್ದರೆ, ನಿಮ್ಮ ಪ್ರೇಮದಲ್ಲಿ, ದಾಂಪತ್ಯದಲ್ಲಿ ವಿಶ್ವಾಸವಿದ್ದರೆ ಮಗುವಿನ ಕುರಿತು ಕನಸುಗಳಿದ್ದರೆ... ಅಂತಹ ಆತ್ಮವಿಶ್ವಾಸವಿದ್ದರೆ, ಕಡೆಗೆ ನಿನ್ನ ಮೇಲೆ ನಿನಗೆ ನಂಬಿಕೆ ಇದ್ದರೆ..." ಈ ಸಾಲುಗಳಲ್ಲಿ 'ನಂಬಿಕೆ' ಎಂಬ ಪದಕ್ಕೆ ಬಹುಸ್ತರದ ಅರ್ಥವಿದೆ. ಮೊದಲನೆಯದು ಪ್ರೀತಿಯ ಮೇಲಿನ ನಂಬಿಕೆ, ಎರಡನೆಯದು ದಾಂಪತ್ಯದ ಮೇಲಿನ ನಂಬಿಕೆ, ಮೂರನೆಯದು ಸ್ವಂತ ವ್ಯಕ್ತಿತ್ವದ ಮೇಲಿನ ನಂಬಿಕೆ. ನಳಿನಿಗೆ ತನ್ನ ಗಂಡನೊಂದಿಗೆ ಮತ್ತೆ ಬದುಕಬೇಕೆಂಬ ಆಸೆ ಇದೆ. ಅದೇ ಸಮಯದಲ್ಲಿ ಸಮರ್ಥನ ಭವಿಷ್ಯವೂ ಅವಳ ನಿರ್ಧಾರದಲ್ಲಿ ಪ್ರಮುಖವಾಗಿದೆ. "ನಾನು ಬರುತ್ತಿದ್ದೇನೆ. ಎಲ್ಲವನ್ನೂ ಬಿಟ್ಟು... ಅಮೆರಿಕೆಯಿಂದ ನಿನ್ನಲ್ಲಿಗೆ ಬರುತ್ತಿದ್ದೇನೆ, ಪರದೇಶದ ಮೋಹ ನುಚ್ಚು ನೂರಾಗುವಂತೆ ನೀನು ನನ್ನನ್ನು ಆಕ್ರಮಿಸಿಕೊಂಡಿದ್ದೀಯ" ಈ ಮಾತಿನಲ್ಲಿ ನಳಿನಿಯ ತ್ಯಾಗದ ಮನೋಭಾವ ವ್ಯಕ್ತವಾಗುತ್ತದೆ. ತನ್ನ ಉದ್ಯೋಗ, ವಿದೇಶದ ಬದುಕು ಮತ್ತು ಹಿಂದಿನ ಜೀವನಶೈಲಿಯನ್ನು ಬಿಟ್ಟು ಪತಿಯೊಂದಿಗೆ ಇರಲು ಅವಳು ಸಿದ್ಧಳಾಗುತ್ತಾಳೆ.

ಶಾರದಾಳಿಗೆ ಪುರುಷೋತ್ತಮನ ಮೇಲೆ ಪ್ರೀತಿ ಇದೆ. ಆದರೆ ಆ ಪ್ರೀತಿಯನ್ನು ಸ್ವೀಕರಿಸುವುದರಿಂದ ಇನ್ನೊಂದು ಕುಟುಂಬದ ಬದುಕು ಬದಲಾಗಬಹುದು ಎಂಬ ಅರಿವು ಅವಳಲ್ಲಿದೆ. ತನ್ನ ವೈಯಕ್ತಿಕ ಸಂಬಂಧದಿಂದ ಹಿಂದೆ ಸರಿದು, ಪುರುಷೋತ್ತಮ ಮತ್ತು ನಳಿನಿಯ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳುವ ಮತ್ತು ಪುನಃ ಕಟ್ಟುವ ಮಧ್ಯಸ್ಥಳಾಗಿ ಕಾಣಿಸಿಕೊಳ್ಳುತ್ತಾಳೆ.

ಕಾದಂಬರಿ ಮುರಿದ ಸಂಬಂಧವನ್ನು ಶಾಶ್ವತ ವೈಫಲ್ಯವೆಂದು ಪರಿಗಣಿಸುವುದಿಲ್ಲ. ವ್ಯಕ್ತಿಗಳು ತಮ್ಮ ತಪ್ಪುಗಳನ್ನು ಅರಿತುಕೊಂಡರೆ, ಪರಸ್ಪರ

ಅರ್ಥಮಾಡಿಕೊಳ್ಳಲು ಸಿದ್ಧರಾದರೆ ಸಂಬಂಧ ಪುನಃ ಕಟ್ಟಿಕೊಳ್ಳಬಹುದು ಎಂಬ ಆಶಾವಾದವನ್ನು ನೀಡುತ್ತದೆ. ಹೀಗಾಗಿ ಮಹಿಳೆಯ ಪಾತ್ರವನ್ನು ಕೇವಲ 'ಪತ್ನಿ', 'ತಾಯಿ' ಅಥವಾ 'ಪ್ರೇಯಸಿ' ಎಂಬ ಸಂಬಂಧದ ಹೆಸರುಗಳಿಂದ ನಿರ್ಧರಿಸಲಾಗುವುದಿಲ್ಲ. ಅವಳು ನೈತಿಕ ನಿರ್ಧಾರ ತೆಗೆದುಕೊಳ್ಳುವ ವ್ಯಕ್ತಿಯಾಗಿಯೂಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತಾಳೆ.

'ಕೃಷ್ಣಮೃಗ' ಎಂಬ ಶೀರ್ಷಿಕೆಯನ್ನು ಪುರುಷೋತ್ತಮನ ಯಶಸ್ಸಿನ ಹುಡುಕಾಟದ ಸಂಕೇತವಾಗಿ ಓದಬಹುದಾದಂತೆ, ಮಹಿಳಾ ಪಾತ್ರಗಳ ಬದುಕಿನಲ್ಲಿಯೂ 'ಹುಡುಕಾಟ'ದ ಅರ್ಥವನ್ನು ಗುರುತಿಸಬಹುದು. ಮಹಿಳಾ ಮನಸ್ಸಿನ ಸಂಘರ್ಷ ಮತ್ತು ಸಂಬಂಧಗಳ ಪುನರ್ ನಿರ್ಮಾಣವು ಪರಸ್ಪರ ಬೇರ್ಪಡಿಸಲಾಗದ ಎರಡು ಪ್ರಮುಖ ಆಯಾಮಗಳಾಗಿವೆ. ಶಾರದಾ ಮತ್ತು ನಳಿನಿ ಎಂಬ ಎರಡು ಮಹಿಳಾ ಪಾತ್ರಗಳ ಮೂಲಕ ಮಹಿಳಾ ಬದುಕಿನ ಎರಡು ವಿಭಿನ್ನ ಅನುಭವಗಳನ್ನು ಕಾದಂಬರಿ ಚಿತ್ರಿಸುತ್ತದೆ. ಇಲ್ಲಿ ಶಾರದಾಳ ಪಾತ್ರವು ಮಹಿಳೆಯ ತ್ಯಾಗವನ್ನು ಮಾತ್ರ ಪ್ರತಿನಿಧಿಸುವುದಿಲ್ಲ. ಅದು ಸ್ವತಂತ್ರ ನೈತಿಕ ನಿರ್ಧಾರ ತೆಗೆದುಕೊಳ್ಳುವ ಮಹಿಳೆಯ ಅಸ್ತಿತ್ವವನ್ನು ಪ್ರತಿನಿಧಿಸುತ್ತದೆ. ಅವಳು ತನ್ನ ಜೀವನವನ್ನು ಹೊಸ ದಿಕ್ಕಿನಲ್ಲಿ ಕೊಂಡೊಯ್ಯುವ ಸಾಮರ್ಥ್ಯ ಹೊಂದಿದ್ದಾಳೆ. ದುಬೈನಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುವ ನಿರ್ಧಾರವೂ ಅವಳ ಸ್ವತಂತ್ರ ಜೀವನದ ಮತ್ತೊಂದು ಆಯಾಮವಾಗಿದೆ. ಮಹಿಳೆಯ ಜೀವನವನ್ನು ಕೇವಲ ಪುರುಷನ ಪ್ರೀತಿಯ ಮೂಲಕ ಅಳೆಯದೆ, ಅವಳ ಸ್ವಂತ ಸಾಮರ್ಥ್ಯ ಮತ್ತು ನಿರ್ಧಾರ ಶಕ್ತಿಯ ಮೂಲಕವೂ ಅಳೆಯಬೇಕು ಎಂಬುದು ಇಲ್ಲಿ ವ್ಯಕ್ತವಾಗುತ್ತದೆ.

ಒಟ್ಟಾರೆ ಕಾದಂಬರಿಯಲ್ಲಿ ಮಹಿಳಾ ಮನಸ್ಸನ್ನು ತ್ಯಾಗ, ಸಹನೆ ಮತ್ತು ಕುಟುಂಬಕ್ಕೆ ಸೀಮಿತವಾದ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಮಾತ್ರ ನೋಡಲಾಗುವುದಿಲ್ಲ. ನಳಿನಿಯ ಪಾತ್ರವು ಸಂಬಂಧಗಳು ಶಾಶ್ವತವಾಗಿ ಮುರಿಯುವುದಿಲ್ಲ ಎಂಬ ಆಶಯವನ್ನು ಮುಂದಿಡುತ್ತದೆ. ಮನುಷ್ಯನಲ್ಲಿ ಆತ್ಮಪರಿಶೀಲನೆ ಮತ್ತು ಬದಲಾವಣೆಯ ಸಾಮರ್ಥ್ಯವಿದ್ದರೆ ಸಂಬಂಧಗಳನ್ನು ಪುನಃ ಕಟ್ಟಿಕೊಳ್ಳಬಹುದು. ಶಾರದಾಳ ಪಾತ್ರವು ಮತ್ತೊಂದು ಸತ್ಯವನ್ನು ಸೂಚಿಸುತ್ತದೆ. ಕೆಲವೊಮ್ಮೆ ಸಂಬಂಧವನ್ನು ಉಳಿಸುವುದಕ್ಕಾಗಿ ವ್ಯಕ್ತಿಯೊಬ್ಬ ತನ್ನ ವೈಯಕ್ತಿಕ ಆಸೆಯನ್ನು ಬದಿಗಿಡಬೇಕಾಗಬಹುದು. ಶಾರದೆ ತನ್ನ ಬದುಕಿನ ವೈಫಲ್ಯವನ್ನು ಮರುಪರಿಶೀಲಿಸಿ, ಶಿಕ್ಷಣ, ವೃತ್ತಿ ಮತ್ತು ಸಾಹಿತ್ಯದ ಮೂಲಕ ಹೊಸ ಅಸ್ತಿತ್ವವನ್ನು ಕಟ್ಟಿಕೊಳ್ಳುತ್ತಾಳೆ. ಸಂಬಂಧಗಳಲ್ಲಿ ಉಂಟಾಗುವ ಬಿರುಕುಗಳನ್ನು ಕೇವಲ ಮುರಿತವಾಗಿ ನೋಡದೆ, ಅವುಗಳ ನಂತರ ರೂಪುಗೊಳ್ಳುವ ಹೊಸ ಸಂಬಂಧಗಳ ಸಾಧ್ಯತೆಯನ್ನೂ ಕಾದಂಬರಿ ಅನಾವರಣಗೊಳಿಸುತ್ತದೆ.

**ಆಕರ ಗ್ರಂಥ**


- ಉಷಾ ನರಸಿಂಹನ್. (2011). *ಕೃಷ್ಣಮೃಗ.* ವಸಂತ ಪ್ರಕಾಶನ.


**ಪರಾಮರ್ಶನ ಗ್ರಂಥ**


- ಶ್ರೀಮತಿ, ಹೆಚ್.ಎಸ್. (2019). *ಸ್ತ್ರೀವಾದ–ಚಿಂತನೆ ಮತ್ತು ಹೋರಾಟ.* ಅಭಿರುಚಿ ಪ್ರಕಾಶನ.